ರದ್ದು ಮಾಡಿದೆ. ಆದರೂ ಕೂಡ ಸರ್ಕಾರದ ಆದೇಶದ ವಿರುದ್ಧವಾಗಿ ನಗರ ಪಾಲಿಕೆಯವರು ಆದೇಶ ಕೊಟ್ಟಿದ್ದಾರೆ, ಏಕೆ ಎಂದು ನನ್ನ ಪ್ರಶ್ನೆ. ಅವರು ತಪ್ಪು ಮಾಹಿತಿಯನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ :- ಅಲ್ಲಿ ಜನ, ವಿಷ ಜಂತುಗಳಿಂದ ಸಾಯುತ್ತಿದ್ದಾರೆ. ನಾಗರೀಕ ಸೌಲಭ್ಯಗಳು ಸರಿಯಾಗಿಲ್ಲ. ವರ್ಗೀಕರಣ ಮಾಡಿದರೆ ಆಯಿತಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸಭೆಯನ್ನು ಕರೆದು ಆ ಸಭೆಯಲ್ಲಿ ಸೆಟ್-ರೈಟ್ ಮಾಡುತ್ತೇನೆಂದು ಹೇಳಿದ್ದೇನೆ. ಅದು ಮಾಡಬೇಡಿ ಇದನ್ನು ಮಾಡಬೇಡಿ ಎಂದು ಹೇಳುವುದು ಸರಿಯಲ್ಲ. ಎಬಿಸಿಡಿ ವರ್ಗೀಕರಣ ಮಾಡುವುದು ಬೇಡ ಎನ್ನುವ ಬಗ್ಗೆ ಡಿಸೈಡ್ ಮಾಡಬೇಕು. ನಾನು ಸಭೆಯನ್ನು ಕರೆಯುತ್ತೇನೆ ನೀವು ಆ ಸಭೆಗೆ ಬಂದು ಚರ್ಚೆ ಮಾಡಿ.

ಉಪಾಧ್ಯಕ್ಷರು :- ಅವರು ಒಪ್ಪಿಕೊಂಡ ಮೇಲೆ ಈ ವಿಷಯ ಮುಗಿದು ಹೋಯಿತು.

ಬೈಂದೂರು ಮತ್ತು ಅರ್ಡಿ ಆಶ್ರಮ ಶಾಲೆಗೆ ಶಿಕ್ಷಕರ ನೇಮಕ

247 (1669)

ಶ್ರೀ. ಕೆ. ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೈಂದೂರು ಮತ್ತು ಅರ್ಡಿ ಇಲ್ಲಿ ಆಶ್ರಮ ಶಾಲೆ ಇದ್ದು, ಶಿಕ್ಷಕರ ನೇಮಕಾತಿ ಆಗದೆ ಇರುವುದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಶಿಕ್ಷಕರನ್ನು ನೇಮಿಸಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುವುದೇ?

ಶ್ರೀ. ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಮತ್ತು ಆ) ಬೈಂದೂರು ಮತ್ತು ಅರ್ಡಿಯಲ್ಲಿರುವ ಆಶ್ರಮ ಶಾಲೆಗಳಲ್ಲಿ ಶಿಕ್ಷಕರನ್ನು ಖಾಯಂ ಆಗಿ ನೇಮಕ ಮಾಡಿರುವುದಿಲ್ಲ. ಆದಾಗ್ಯೂ ಆ ಶಾಲೆಗಳ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಸಲುವಾಗಿ ಗೌರವಧನದ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಖಾಯಂ ಶಿಕ್ಷಕರನ್ನು ಅದಷ್ಟು ಬೇಗ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ. ಕೆ. ಗೋಪಾಲ ಪೂಜಾರಿ :- ಸನ್ಮಾನ್ಯ ಉಪಾಧ್ಯಕ್ಷರೆ, ಬೈಂದೂರು ಮತ್ತು ಅರ್ಡಿ ಆಶ್ರಮ ಶಾಲೆಯಲ್ಲಿ ಶಿಕ್ಷಕರನ್ನು ಗೌರವಧನದಲ್ಲಿ ನೇಮಕಾತಿಯನ್ನು ಮಾಡಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಆಶ್ರಮಶಾಲೆಯಲ್ಲಿ ಸರಿಯಾಗಿ ಶಿಕ್ಷಕರು ಅಲ್ಲಿಗೆ ಬರುತ್ತಿಲ್ಲ. ಈ ಹಿಂದೆ ನಾನು ಸಚಿವರನ್ನು ಭೇಟಿಯಾಗಿ ಖಾಯಂ ಶಿಕ್ಷಕರನ್ನು ನೇಮಕಾತಿ ಮಾಡಬೇಕೆಂದು ಮನವಿಯನ್ನು ಕೊಟ್ಟಿದ್ದೇನೆ. ಆದರೆ ಇಲ್ಲಿಯತನಕ ಖಾಯಂ ನೇಮಕಾತಿ ಆಗಲಿಲ್ಲ. ಖಾಯಂ ನೇಮಕಾತಿಯನ್ನು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ಯಾವಾಗ ಖಾಯಂ ನೇಮಕಾತಿಯನ್ನಾಗಿ ಮಾಡುತ್ತೀರಿ ಎಂಬ ಬಗ್ಗೆ ನನಗೆ ಉತ್ತರ ಬೇಕಾಗಿದೆ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಂ.ಕೃಷ್ಣಾ ರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಈ ಆಶ್ರಮ ಶಾಲೆಗಳಿಗೆ ನಾವು ಖಾಯಂ ಆಗಿ ಉಪಾಧ್ಯಾಯರನ್ನು ನೇಮಕ ಮಾಡುವಲ್ಲಿ ಬಹಳ ತೊಂದರೆಯಾಗಿದೆ. ಗೌರವಯುತವಾಗಿ ನಾವು ಪೇಮೆಂಟನ್ನು ಕೊಟ್ಟು, ಅವರು ಶಿಕ್ಷಕರಾಗಿ ಅಲ್ಲಿ ಕೆಲಸ ಮಾಡುವುದು ಸರಿಯಲ್ಲ. ಅದು ಸಕ್ರಮವಲ್ಲ

ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಅಧಿಕಾರಿಗಳ ಸಭೆಯನ್ನು ಮಾಡಿದ್ದೇವೆ. ಅಡಿಗೆಯವರು, ವಾರ್ಡನ್ಸ್, ಅದೇ ರೀತಿಯಾಗಿ ಶಿಕ್ಷಕರ ನೇಮಕಾತಿಯನ್ನು ಕೂಡ ಆದಷ್ಟು ಜಾಗ್ರತೆ ಮಾಡುತ್ತೇವೆ.

ಬೆಂಗಳೂರು ನಗರದಲ್ಲಿ ಖಾದಿ ಬಟ್ಟೆಗಳ ವಸ್ತು ಪ್ರದರ್ಶನ

1628

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ

ಅ) ಬೆಂಗಳೂರು ನಗರದಲ್ಲಿರುವ ಒಟ್ಟು ಖಾದಿ ಬಟ್ಟೆಗಳ ಮಾರಾಟ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಮಾರಾಟ ಕೇಂದ್ರಗಳ ಸಂಖ್ಯೆ ಎಷ್ಟು?

ಇ) ಬೆಂಗಳೂರು ನಗರದಲ್ಲಿ ಖಾದಿ ಬಟ್ಟೆ ಹಾಗೂ ಇತರ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಖಾದಿ ಬಟ್ಟೆಗಳಿಗೆ ಹೆಚ್ಚಿನ ರಿಯಾಯಿತಿ ನೀಡಿ ಖಾದಿ ವಸ್ತು ಪ್ರದರ್ಶನಗಳನ್ನು ನಗರದ ಎಲ್ಲಾ ಭಾಗಗಳಲ್ಲೂ ಏರ್ಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಬೆಂಗಳೂರು ನಗರದಲ್ಲಿ ಒಟ್ಟು 27ಪ್ರಮಾಣಿತ ಖಾದಿ ಮಾರಾಟ ಕೇಂದ್ರಗಳನ್ನು ಮಂಡಲಿಯಿಂದ ಹಾಗೂ ಖಾದಿ ಆಯೋಗದಿಂದ ಧನಸಹಾಯ ಪಡೆದ ವಿವಿಧ ಸಂಘ : ಸಂಸ್ಥೆಗಳು ನಡೆಸುತ್ತಿವೆ.

ಆ) ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿ 4 ಖಾದಿ ಭಂಡಾರಗಳು ಕಾರ್ಯನಿರ್ವಹಿಸುತ್ತಿವೆ.

ಇ) ವಿವಿಧ ಸಂಘ :ಸಂಸ್ಥೆಗಳಿಗೆ ಖಾದಿ ಮಂಡಲಿ ಮತ್ತು ಖಾದಿ ಆಯೋಗದಿಂದ ಧನಸಹಾಯ ನೀಡಿ, ಬೆಂಗಳೂರು ನಗರದ ಸೂಕ್ತ ಸ್ಥಳಗಳಲ್ಲಿ ಮಾರಾಟ ಮಳಿಗೆಗಳನ್ನು ತೆರೆಯಲು ಪ್ರೋತ್ಸಾಹ ನೀಡುವುದಲ್ಲದೆ ಕಾಲಕಾಲಕ್ಕೆ ಖಾದಿ ಬಟ್ಟೆಗಳ ಚಿಲ್ಲರೆ ಮಾರಾಟದ ಮೇಲೆ ಆಕರ್ಷಕ ರಿಯಾಯಿತಿ ನೀಡಿ, ಸಾಮಾನ್ಯ ಗ್ರಾಹಕರಿಗೂ ಖಾದಿ ಬಟ್ಟೆ ತಲುಪುವಂತೆ ಉತ್ತೇಜನ ನೀಡಲಾಗುತ್ತಿದೆ. ಪ್ರತಿ ವರ್ಷವೂ ಖಾದಿ ಬಟ್ಟೆಗಳ ಮೇಲೆ ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರವು ರಿಯಾಯಿತಿಯನ್ನು ನೀಡುತ್ತಿದೆ. ಎರಡು ಸಂಚಾರಿ ಮಳಿಗೆಗಳನ್ನು ಪ್ರಾರಂಭಿಸಲಾಗಿದ್ದು, ಇವು ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇನ್ನು ಹೆಚ್ಚಿನ ಸಂಖ್ಯೆಯ ಸಂಚಾರಿ ಮಳಿಗೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ) ನಗರದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಇತ್ತೀಚೆಗೆ ಖಾದಿ ಬಟ್ಟೆಗಳ ವಸ್ತು ಪ್ರದರ್ಶನವನ್ನು ಖಾದಿ ಮಂಡಲಿಯಿಂದ ಏರ್ಪಡಿಸಲಾಗಿತ್ತು. ಈ ವಸ್ತು ಪ್ರದರ್ಶನವು ಅಪಾರ ಜನ ಮನ್ನಣೆ ಗಳಿಸಿ, ಖಾದಿ ಬಟ್ಟೆಗಳು ಹೆಚ್ಚಿನ ರೀತಿಯಲ್ಲಿ ಮಾರಾಟವಾಗಲು ಕಾರಣವಾಯಿತು. ಇದೇ ರೀತಿ ನಗರದ ಇತರೆ ಬಡಾವಣೆಗಳಲ್ಲಿ ಹಂತ ಹಂತವಾಗಿ ವಸ್ತು ಪ್ರದರ್ಶನ ಏರ್ಪಡಿಸಲು ಪರಿಶೀಲಿಸಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾಲ್ಕನೆ ಪ್ರಶ್ನೆಗೆ ಖಾದಿ ಬಟ್ಟೆಗಳಿಗೆ ಹೆಚ್ಚಿನ ರಿಯಾಯಿತಿ ನೀಡಿ ಎಂದು ನಾನು ಕೇಳಿದ್ದೆ. ನಗರದ ಎಲ್ಲಾ ಭಾಗದಲ್ಲೂ ಕೂಡ ಖಾದಿ ಬಟ್ಟೆಯ ಬಗ್ಗೆ ವಸ್ತು ಪ್ರದರ್ಶನವನ್ನು